Edit with WPS Office

6 ನೆ ತರಗತಿ

ವಿಷಯ : ಕನ್ನಡ

ದಿನಾಂಕ : 02- 09 - 2020

ಪದ್ಯಪಾಠ : ನನ್ನ ದೇಶ ನನ್ನ ಜನ

ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

1) ಭಾರತ ದೇಶದ ವೈವಿಧ್ಯತೆಯನ್ನು ಕವಿ ಕಣವಿ ಹೇಗೆ ಬಣ್ಣಿಸಿದ್ದಾರೆ?

ಉ : ಭಾರತದಲ್ಲಿ ನೂರು ಭಾಷೆಗಳಿವೆ, ಬಣ್ಣಗಳಿವೆ, ಭಾವನೆಗಳಿವೆ, ನೆಲೆಗಳಿವೆ, ಮತ್ತು ವೇಷಗಳಿವೆ ಹೀಗೆ ಭಾರತ ದೇಶವು ವೈವಿಧ್ಯತೆಯಿಂದ ಕೂಡಿದೆ.

2) ಕಣವಿಯವರು ಭವಿಷ್ಯದ ಒಡಲಿಗೆ ನೀಡುವ ಸಂದೇಶವೇನು?

ಉ : ಆಗಿರುವುದನ್ನು ಮರೆತು ಇಂದಿನ ದಿನಕ್ಕೆ ಜೀವ ತುಂಬಿ ನಾಳಿನ ಜೀವನವನ್ನು ಉಜ್ವಲಗೊಳಿಕೊಳ್ಳೋಣ ಎಂದು ಸಂದೇಶ ನೀಡಿದ್ದಾರೆ.

ಭಾಷಾಭ್ಯಾಸ :

ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

1) ಮಾನ × ಅವಮಾನ

2) ಹಿರಿಯ × ಕಿರಿಯ

3) ಪ್ರಾಚೀನ × ನವೀನ

4) ಏರು × ಇಳಿ

ಪ್ರಾಸ ಪದಗಳನ್ನು ಬರೆಯಿರಿ :

ಜನ - ಘನ

ನೆಲೆ - ಕಳೆ

ಚಣ - ಗುಣ

ಬೆಳೆ - ಕಳೆ

ತೊಳೆ - ಹೊಳೆ

ಒಡಲಿಗೆ - ಬಾಳಿಗೆ

ತತ್ಸಮ ತದ್ಭವಗಳು :

ಋಣ > ರಿಣ, ಮುಖ > ಮೊಗ, ವರ್ಣ > ಬಣ್ಣ, ನಾಲ್ಕು > ನಾಕು,
ಜನ್ಮ >ಜನುಮ, ಚಂದ್ರ >ಚಂದಿರ, ಮೂಕ >ಮೂಗ, ಕ್ಷಣ > ಚಣ

Edit with WPS Office

ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಉಕ್ಕೇರಲಿ = ಉಕ್ಕು + ಏರಲಿ

ಭವಿಸ್ಯದೊಡಲಿಗೆ = ಭವಿಷ್ಯದ + ಒಡಲಿಗೆ

ಎದ್ದೇಳಿ = ಎದ್ದು + ಏಳಿ

ಇಲ್ಲಿರುವ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ  ಬರೆಯಿರಿ.

1) ಋಣ :  ತಂದೆ, ತಾಯಿ ಮತ್ತು ಗುರುಗಳ ಋಣವನ್ನು   ತಿರೀಸಬೇಕು.

2)  ಸ್ವಚ್ಛ0ದ : ಆಕಾಶದಲ್ಲಿ ಹಕ್ಕಿಗಳು ಸ್ವಚ್ಛ0ದವಾಗಿ ಹಾರಾಡುತ್ತವೆ.

3) ಸಮೃದ್ಧಿ : ಮಳೆಗಾಲದಲ್ಲಿ ಪರಿಸರವು ಸಮೃದ್ಧಿಯಿಂದ ಕೂಡಿರುತ್ತದೆ.